ಸೋಮವಾರ ನಾವು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಆರಂಭಿಸುತ್ತಿದ್ದೇವಲ್ಲ!

ಶ್ರೀ ವಾಟಾಳ್ ನಾಗರಾಜ್:- ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಇದರ ಬಗ್ಗೆ ಚರ್ಚಿಸುವುದಕ್ಕಿಂತ ಇದರ ಬಗ್ಗೆ ಒಂದು ವಿಶೇಷ ಚರ್ಚೆಗೇ ತಾವು ಅವಕಾಶ ಮಾಡಿಕೊಡಬೇಕು. ನನ್ನ ಬೇಡಿಕೆ ಅಷ್ಟೇ ಇನ್ನೇನೂ ಇಲ್ಲ.

ಅಧ್ಯಕ್ಷರು:- ಆಯಿತು, ಅದರ ಬಗ್ಗೆ ನೋಡೋಣ. ನಿಮ್ಮ ಸಲಹೆ ಚೆನ್ನಾಗಿದೆ. ಆ ಬಗ್ಗೆ ಆಲೋಚನೆ ಮಾಡಿ ನೋಡೋಣ.

ಇ. ಡಾ. ಚಿತ್ತರಂಜನ್ ರವರ ಮನೆಯವರಿಗೆ ಪರಿಹಾರ ನೀಡದೇ ಇರುವ ಬಗ್ಗೆ.

ಶ್ರೀ ಶಿವಾನಂದ ನಾಯಕ್:- ಮಾನ್ಯ ಅಧ್ಯಕ್ಷರೇ, ಡಾ: ಚಿತ್ತರಂಜನ್‌ರವರ ಕೊಲೆಯಾಗಿ ಒಂದು ವರ್ಷ ಕಳೆಯುತ್ತಾ ಬಂದರೂ ಇನ್ನೂವರೆಗೆ ಅವರ ಮನೆಯವರಿಗೆ ಪರಿಹಾರ ಕೊಡಲಿಲ್ಲ. ಕೊಲೆಗೆ ಕಾರಣರಾದ ಆರೋಪಿಗಳನ್ನು ಇನ್ನೂ ಬಂಧಿಸಿಲ್ಲ.

ಆ ಕೆಲಸ ಯಾವಾಗ ಮಾಡುತ್ತೀರಿ? ಯಾವಾಗ ಪರಿಹಾರ ನೀಡುತ್ತೀರಿ? ಎಂಬ ಬಗ್ಗೆ ಸರ್ಕಾರ ಹೇಳಬೇಕು.

+ ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ (ಅಂಕೋಲ):- ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಏಪ್ರಿಲ್ 10 ರಂದು ಡಾ: ಚಿತ್ತರಂಜನ್‌ರವರ ಕೊಲೆಯಾಗಿತ್ತು. ಸರ್ಕಾರ ಕೊಲೆ ಬಗ್ಗೆ ಪ್ರಾರಂಭದಲ್ಲಿ ಸಿ.ಓ.ಡಿ. ತನಿಖೆ ಅಂತ ಮಾಡಿ ನಂತರ ಅದನ್ನು ಸಿ.ಬಿ.ಐ.ಗೆ ವಹಿಸಿದೆ. ಸಿ.ಓ.ಡಿ.ಗೂ ಮತ್ತು ಸಿ.ಬಿ.ಐ.ಗೂ ಸಾಕಷ್ಟು ಗೊಂದಲ ನಿರ್ಮಾಣವಾಗಿರುವುದನ್ನು ನಾವು ನೋಡುತ್ತಿದ್ದೇವೆ. ರಾಜ್ಯ ಸರ್ಕಾರ ಸಿ.ಬಿ.ಐ ಮೇಲೆ ಒತ್ತಡ ತಂದು ಸಧ್ಯದಲ್ಲೇ ಅದು ವರದಿಯನ್ನು ಬಹಿರಂಗ ಪಡಿಸುವಂತೆ ಮಾಡಬೇಕಾಗಿದೆ. ಆ ಬಗ್ಗೆ ಇವತ್ತಿನ ಪತ್ರಿಕೆಯಲ್ಲೂ ಕೂಡ ಬಂದಿದೆ. ಸಿ.ಓ.ಡಿ.ಗಳು ಆರೋಪಿಗಳು ಯಾರು ಎಂದು ಹೇಳಿದರೆ, ಸಿ.ಬಿ.ಐ.ನವರು ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ತಯಾರಿಲ್ಲ ಎಂಬುದು ಇವತ್ತಿನ ದಿವಸ ಪತ್ರಿಕೆಯಲ್ಲೂ ಕೂಡ ವರದಿಯಾಗಿರುವುದನ್ನು ನಾವು ನೋಡಬಹುದಾಗಿದೆ. ಒಂದು ರೀತಿ ವ್ಯವಸ್ಥಿತವಾಗಿ ಈ ದುಷ್ಕೃತ್ಯವನ್ನು, ಹತ್ಯೆಯನ್ನು ಮಾಡಿರುವಂತಹವರನ್ನು ರಕ್ಷಿಸುವಂಥಾದ್ದು ನಡೆಯುತ್ತಿದೆ ಏನೋ ಎಂದು ನಮ್ಮ ಜಿಲ್ಲೆಯಲ್ಲಿ ಜನರು ಭಾವಿಸಿಕೊಳ್ಳುವಂತಾಗಿದೆ. ಇವತ್ತು ಶಾಸಕರಾಗಿದ್ದಂತಹ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿದಂತಹ ಆರೋಪಿಗಳನ್ನು ಬಂಧಿಸಲಿಕ್ಕೆ ಆಗಿಲ್ಲ, ದುಷ್ಕರ್ಮಿಗಳನ್ನು ಹಿಡಿಯಲು ಆಗಲಿಲ್ಲ. ಸಿ.ಓ.ಡಿ. ಮತ್ತು ಸಿ.ಬಿ.ಐ.ಗಳ ಮಧ್ಯೆ ಈ ರೀತಿ ಗೊಂದಲಗಳು ದಿನ ಬೆಳಗಾದರೆ ಬರುತ್ತಿದ್ದರೆ ಇದು ಯಾವ ರೀತಿಯ ಹಿತಾಸಕ್ತಿ? ಏಕೆ ಇನ್ನೂ ಆರೋಪಿಗಳನ್ನು ಬಂಧಿಸಿಲ್ಲ ಎನ್ನತಕ್ಕಂತಹ ಒಂದು ಗುಮಾನಿ ಬಹಳ ದೊಡ್ಡ ರೀತಿಯಲ್ಲಿ ಮೂಡುತ್ತಿದೆ. ಹಾಗಾಗಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ, ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ತಕ್ಷಣದಲ್ಲಿ 'ಟೈಮ್ ಬಾಂಡ್' ಅಂದರೆ

ಸಮಯದ ಒಂದು ಮಿತಿಯೊಳಗೆ, ಇವರು ಇದರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದಾರೆ? ಸಿ.ಬಿ.ಐ.ನವರ ವರದಿ ಏನಿದೆ, ಅದನ್ನು ಬಹಿರಂಗಪಡಿಸುವುದಕ್ಕೆ ಒತ್ತಾಯ ಮಾಡಬೇಕು. ಮತ್ತು ತಕ್ಷಣದಲ್ಲಿ ದುಷ್ಕರ್ಮಿಗಳು ಯಾರು ಎಂಬುದು ಗೊತ್ತಿದೆ, ಸಿ.ಓ.ಡಿ.ಗೆ ಗೊತ್ತಿದೆ, ಸಿ.ಬಿ.ಐ.ಗೆ ಗೊತ್ತಿದೆ, ಆದರೂ ಇನ್ನೂ ಅವರನ್ನು ಬಂಧಿಸುವಂತಹ ಧೈರ್ಯವನ್ನು ಮಾಡುತ್ತಿಲ್ಲ. ಆ ಶಕ್ತಿಯನ್ನು ಇವತ್ತು ಸರ್ಕಾರ ಕಳೆದುಕೊಂಡಿದೆ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂತಹ ವಿಷಯ. ಇದನ್ನು ಸರ್ಕಾರ ಬಹಳ ಜವಾಬ್ದಾರಿಯುತವಾಗಿ ತೆಗೆದುಕೊಳ್ಳಬೇಕು. ಎರಡನೇ ವಿಷಯವೆಂದರೆ, ಯಾವುದೇ ರೀತಿಯ ಪರಿಹಾರವನ್ನು ರಾಜ್ಯ ಸರ್ಕಾರವು ಮೃತರ ಕುಟುಂಬದವರಿಗೆ ಕೊಟ್ಟಿಲ್ಲ. ಇವತ್ತು ನಮ್ಮ ಸರ್ಕಾರ ಎಲ್ಲೋ ಒಂದೆರಡು ಕಡೆ ಯಾವುದೋ ಸಣ್ಣ ಪುಟ್ಟ ಘಟನೆಗಳಾದರೆ ತಕ್ಷಣದಲ್ಲಿ ಸ್ಥಳಕ್ಕೆ ಸಂಬಂಧಪಟ್ಟ ಮಂತ್ರಿಗಳು ಅಥವಾ ಇನ್ನಾರಾದರೂ ಹೋಗಿ ಪರಿಹಾರ ಕೊಟ್ಟು ಬರುತ್ತಾರೆ. ಒಬ್ಬ ಶಾಸಕರ ಹತ್ಯೆಯಾದರೆ, ಅವರ ಕುಟುಂಬಕ್ಕೆ ಬೇರೆ ಯಾವುದೇ ರೀತಿಯ ಆದಾಯ ಇಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದ್ದರೂ ಸಹಾ ಇವತ್ತು ಸರ್ಕಾರ ಇನ್ನೂತನಕ ಪರಿಹಾರ ಕೊಡುವುದಕ್ಕೆ ಅಸಮರ್ಥವಾಗಿದೆ. ಹೀಗಾದಾಗ ನಾವು ಹೇಗೆ ಈ ಸರ್ಕಾರದಲ್ಲಿ ವಿಶ್ವಾಸ ಇಡುವುದು? ಮಾನ್ಯ ಅಧ್ಯಕ್ಷರೇ, ಬಹಳ ನೋವಿನ ಸಂಗತಿ ಏನೆಂದರೆ, ಶಾಸಕರಾಗಿದ್ದಂತಹ ವ್ಯಕ್ತಿಗಳು ಕೊಲೆಯಾದರೂ ಅವರ ಕುಟುಂಬ ವರ್ಗದವರಿಗೆ ಪರಿಹಾರ ಸಿಗುವುದಿಲ್ಲ ಅಂದರೆ ಹೇಗೆ?...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮೃತ ಶಾಸಕರ ಕುಟುಂಬ ವರ್ಗಕ್ಕೆ ಪರಿಹಾರ ನೀಡುವುದಾಗಿ ಸರ್ಕಾರದವರು ಆರು ತಿಂಗಳ ಹಿಂದೆಯೇ ಈ ಸದನದಲ್ಲಿ ಪ್ರಕಟಿಸಿದ್ದರೂ ಇದುವರೆವಿಗೂ ಪರಿಹಾರ ನೀಡಿರುವುದಿಲ್ಲ.....

ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ:- ಮಾನ್ಯ ಖರ್ಗೆಯವರೇ, ದಯವಿಟ್ಟು ನನ್ನ ಮಾತು ಮುಗಿಸಿದ ನಂತರ ತಾವು ಮಾತನಾಡಿ. ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಈಗ ದಯವಿಟ್ಟು ನನಗೆ ಮಾತನಾಡಲು ಅವಕಾಶ ಮಾಡಿಕೊಡಿ. ಇಷ್ಟು ಗಂಭೀರವಾದಂತಹ ವಿಷಯವನ್ನು ಸರ್ಕಾರ ಹೇಗೆ ಇಷ್ಟು ಲಘುವಾಗಿ ತೆಗೆದುಕೊಳ್ಳುತ್ತದೆ? ಏಪ್ರಿಲ್ 10ನೇ ತಾರೀಖಿನ ದಿವಸ ಅವರ ಕೊಲೆಯಾಗಿ ಆಗಲೇ ಎಷ್ಟು ದಿನಗಳಾದವು? ಆಗಲೇ ಮತ್ತೊಂದು ಏಪ್ರಿಲ್ ತಿಂಗಳು ಬರುತ್ತಿದೆ. ಏಕೆ ಈ ಸರ್ಕಾರ ಇದರ ಬಗ್ಗೆ ಇಷ್ಟು ಬೇಜವಾಬ್ದಾರಿಯುತವಾಗಿದೆ? ಆರೋಪಿಗಳನ್ನು ಬಂಧಿಸುವುದಿಲ್ಲ, ಸಿ.ಬಿ.ಐ. ತನಿಖೆ ಏನಾಯಿತೋ ಗೊತ್ತಿಲ್ಲ, ಸಿ.ಓ.ಡಿ. ಮತ್ತು ಸಿ.ಬಿ.ಐ. ಮಧ್ಯೆ ಜಗಳ....

ಅಧ್ಯಕ್ಷರು:- ಮತ್ತೆ ಮತ್ತೆ ಹೇಳಿದ್ದನ್ನೇ ಹೇಳಿ ಪುನರಾವರ್ತನೆ ಮಾಡಬೇಡಿ. ಈ ಎಲ್ಲಾ ವಿಚಾರಗಳನ್ನು ತಾವು ಸ್ಪಷ್ಟವಾಗಿ ಆಗಲೇ ಹೇಳಿದ್ದೀರಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿನ ಒಬ್ಬ ಸದಸ್ಯರು ಸತ್ತು ಹೋದ ಮೇಲೆ ಅವರ ಕುಟುಂಬದವರಿಗೆ ಪರಿಹಾರ ಕೊಡುತ್ತೇವೆಂದು ಸರ್ಕಾರದವರು ಸದನದಲ್ಲೇ ಅನೌನ್ಸ್ ಮಾಡಿ, ಆರು ತಿಂಗಳ ಮೇಲೆ ನಾವಿಲ್ಲಿ ಪುನಃ ಸೇರುತ್ತಿದ್ದೇವೆ. ಅಂತಹವರಿಗೆ ನಾವು ಇವತ್ತಿನ ದಿವಸ ಪರಿಹಾರ ತಲುಪಿಸುವುದಕ್ಕೆ ಆಗಲಿಲ್ಲ ಎಂದರೆ ಸಾಮಾನ್ಯ ನಾಗರೀಕರ ಗತಿ ಏನು?

MR. SPEAKER:- There is a commitment.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪರಿಹಾರ ಕೊಡುತ್ತೇವೆಂದು ಸರ್ಕಾರ ಈ ಸದನದಲ್ಲೇ ಅನೌನ್ಸ್ ಮಾಡಿದೆ. ಇವತ್ತಿನ ದಿವಸ ಇನ್ನೂ ಡಾ: ಚಿತ್ತರಂಜನ್ ಅವರ ಕುಟುಂಬದವರಿಗೆ ಪರಿಹಾರದ ಹಣ ತಲುಪಿಲ್ಲವೆಂದರೆ ಹೇಗೆ? ಈ ಬಗ್ಗೆ ಮತ್ತೊಮ್ಮೆ ಸದನದಲ್ಲಿ ವಿಷಯ ಪ್ರಸ್ತಾಪಿಸಬೇಕೆಂದರೆ, ಅದು ಎಷ್ಟರಮಟ್ಟಿಗೆ ನ್ಯಾಯಯುತವಾಗಿದೆ ಎಂಬುದನ್ನು ಮಾನ್ಯ ಅಧ್ಯಕ್ಷರೇ, ತಾವೇ ಹೇಳಿ. ಪದೇ ಪದೇ ಈ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಬೇಕೆಂದರೆ ಹೇಗೆ?

ಅಧ್ಯಕ್ಷರು:- ಆ ವಿಷಯವನ್ನು ಈಗಲೇ ಸೆಟ್‌ರೈಟ್ ಮಾಡಿಸಿಬಿಡೋಣ ಇರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪದೇ ಪದೆ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಬೇಕೇ? ನಮಗೆ ಪರಿಹಾರ ಕೊಡಿ, ರಕ್ಷಣೆ ಕೊಡಿ, ಸಿ.ಬಿ.ಐ. ಎನ್‌ಕ್ವೈರಿ ಮಾಡಿ ಅಂತ. ಅದೂ ಒಬ್ಬ ಸಿಟ್ಟಿಂಗ್ ಮೆಂಬರ್ ಆಗಿದ್ದವರ ವಿಷಯದಲ್ಲಿ ಈ ರೀತಿ ಪ್ರಸ್ತಾಪಿಸಬೇಕೇ? ಅಮಾನುಷವಾಗಿ ಕೊಲೆಯಾದಂತಹ ಶಾಸಕರ ಬಗ್ಗೆಯೂ ಸರ್ಕಾರದ ಗಮನ ಇಲ್ಲವೆಂದು ಹೇಳಿದರೆ ಹೇಗೆ? ಏನಿದು?

ಶ್ರೀ ವೈ. ರಾಮಕೃಷ್ಣ:- ನಾವು ಪದೇ ಪದೇ ಈ ವಿಷಯವನ್ನು ಹೌಸ್‌ನಲ್ಲಿ ಪ್ರಸ್ತಾಪಿಸಿ ಲಘು ಮಾಡಬಾರದು. ಹಾಲಿ ಶಾಸಕರಾಗಿದ್ದವರು ಅನ್-ನ್ಯಾಚುರಲ್ಲಾಗಿ ಸತ್ತಾ ಸರ್ಕಾರವೇ ಮುಂದೆ ಬಂದು ಈ ದಿಸೆಯಲ್ಲಿ ಏನು ಮಾಡಬೇಕಾಗಿತ್ತೋ ಅದನ್ನು ಮಾಡಬೇಕಿತ್ತು. ಇಷ್ಟು ಇನಾರ್ಡನೇಟ್ ಡಿಲೇ ಆದರೂ ಕೂಡ justice delayed is justice denied ಎಂದು; ಹೇಳುವ ಹಾಗೆ ನಿಧಾನವಾಗಿ ಮಾಡಿದರೆ ಅದರ ಪ್ರಾಮುಖ್ಯತೆ ಹೋಗುತ್ತದೆ. ದಯವಿಟ್ಟು ಆ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಸರ್ಕಾರ ಕೂಡಲೇ ಮಾಡಬೇಕು.

MR. SPEAKER:- Obviously, there might not have been any *malafide* intention. Probably there is some confusion. There was a commitment on the floor of the House that we will give some compensation to the family of Dr. Chittaranjan.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ, ನಾವು ಈ ವಿಷಯವನ್ನು ಈ ತರಹ ಚರ್ಚೆ ಮಾಡುವುದೇ ಅಲ್ಲ. ಏಕೆಂದರೆ, ನನಗೆ ಯಾವುದಾದರೂ ಒಂದು ಗೈಡ್‌ಲೈನ್ಸ್ ಬೇಕು. ಅದನ್ನು ತಾವೇ ಹೇಳಿ. ಈ ಬಗ್ಗೆ ಒಂದು ಗೈಡ್‌ಲೈನ್ಸ್ ನಮಗೆ ಕೊಡಿ. ಏಕೆಂದರೆ, ಆ ರೀತಿ ಸಿಟಿಂಗ್ ಮೆಂಬರ್ ಮರ್ಡರ್ ಆಗಿದ್ದು ಬಹಳ ಅಪರೂಪ. ಇದೊಂದು ಅನ್-ಪ್ರಿಸಿಡೆಂಟೆಡ್ ಘಟನೆ. ಇದಕ್ಕೆ ಯಾವ ಆಧಾರದ ಮೇಲೆ ನಾನು ಪರಿಹಾರ ಕೊಡಲಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಯಾವ ಆಧಾರದ ಮೇಲೆ ಪರಿಹಾರ ಕೊಡಲಿ ಎಂದು ಕೇಳುತ್ತಿರುವವರು, ಅವತ್ತಿನ ದಿವಸ ಪರಿಹಾರ ಕೊಡುತ್ತೇವೆಂದು ಸದನದಲ್ಲಿ ಅನೌನ್ಸ್ ಮಾಡಬಾರದಿತ್ತು.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್:- ಸದನದಲ್ಲಿ ಅನೌನ್ಸ್ ಮಾಡುವಂತಹ ಅವಶ್ಯಕತೆ ಏನಿತ್ತು? ಅನ್-ಪ್ರಿಸಿಡೆಂಟೆಡ್ ಘಟನೆ ಎಂದರೆ ಹೇಗೆ? ಈ ರೀತಿಯಾದಂತಹ ಬೇಜವಾಬ್ದಾರಿತನದ ಉತ್ತರವನ್ನು ನಾವು ಮಾನ್ಯ ಮುಖ್ಯಮಂತ್ರಿಗಳಿಂದ ನಿರೀಕ್ಷೆ ಮಾಡಿರಲಿಲ್ಲ.

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಯಾರಾದರೂ ಏನಾದರೂ ಹೇಳಿದಾಗ ಏನು ಹೇಳುತ್ತಾರೋ ಆ ಮಾತಿನ ಹಿಂದೆ ಇರತಕ್ಕಂತಹ ಭಾವನೆ ಏನು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು, ಇಂತಹ ಘಟನೆ ಎಂದೂ ನಡೆದಿರಲಿಲ್ಲ, ಇದೇ ಮೊದಲನೆಯ ಬಾರಿ ಈ ರೀತಿಯಾಗಿ ನಡೆದಿರತಕ್ಕದ್ದು, ನಮಗೆ ಏನಾದರೂ ಒಂದು ಯಾರ್ಡ್‌ಸ್ಟಿಕ್ ಬೇಕಲ್ಲಾ ಪರಿಹಾರ ಕೊಡುವುದಕ್ಕೆ, ಹಾಗಾಗಿ ನೀವು ಏನು ಹೇಳುತ್ತೀರೋ ಅದನ್ನು ನಾನು ಮಾಡುತ್ತೇನೆ, ಅದರ ಬಗ್ಗೆ ನಾವು ಏನಾದರೂ ಒಂದು ತೀರ್ಮಾನಕ್ಕೆ ಬರಬೇಕಲ್ಲವೇ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ಎಲ್ಲರೂ ಒಟ್ಟಿಗೇ ಎದ್ದು ನಿಂತು ಮಾತನಾಡಿದರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಏನಾದರೂ, ನಾನು ಪರಿಹಾರ ಕೊಡುವುದಿಲ್ಲ ಎಂದು ಹೇಳಿದರೇ? ಏಕೆ ಕೊಡಬೇಕು ಎಂದು ಏನಾದರೂ ಅವರು ಕೇಳಿದರೇ? ಏಕೆ ನೀವು ಸಿಟ್ಟಿಗೆದ್ದಿದ್ದೀರಿ?

ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ:- ಶಾಸಕರ ಕೊಲೆಯಾಗಿ ಒಂದು ವರ್ಷವಾದರೂ ಪರಿಹಾರ ಸಿಗಲಿಲ್ಲವಲ್ಲಾ ಎಂಬ ನೋವು ನಮಗೆ ಇದೆ. ಯಾರ್ಡ್ ಸ್ಟಿಕ್ ಅನ್ನು ನಿಶ್ಚಯ ಮಾಡುವುದಕ್ಕೆ ಒಂದು ವರ್ಷ ಕಾಲಾವಧಿ ಬೇಕೇ?

ಅಧ್ಯಕ್ಷರು:- ಭಾವೋದ್ರೇಕಕ್ಕೆ ಒಳಗಾಗುವುದರಿಂದ ಏನೂ ಆಗುವುದಿಲ್ಲ, ಅದಕ್ಕೆ ಪರಿಹಾರ ಕಂಡು ಹಿಡಿಯೋಣ. ಕರ್ನಾಟಕ ವಿಧಾನ ಮಂಡಲದಿಂದ ವಾಹನ ಖರೀದಿ ಮಾಡಲಿಕ್ಕೆಂದು ಅವರು ಸಾಲ ಪಡೆದುಕೊಂಡಿದ್ದರು. ಅದನ್ನು ನಾವು ಮನ್ನಾ ಮಾಡಿದ್ದೇವೆ. ಅವರು ಸಾಲವನ್ನು ಕೊಡಬೇಕಾಗಿಲ್ಲ ಎನ್ನತಕ್ಕಂತಹ ತೀರ್ಮಾನವನ್ನು, ಅದು ನನ್ನ ಅಧಿಕಾರ ವ್ಯಾಪ್ತಿಗೆ ಬರುವುದರಿಂದ, ನಾನೇ ಆ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ಈ ವಿಚಾರದಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ನನ್ನ ಕಡೆ ತಿರುಗಿ ಹೇಳುತ್ತಿದ್ದಾರೆ, ನೀವು ಏನು ಹೇಳಿದರೆ ನಾನು ಅದನ್ನು ಮಾಡುತ್ತೇನೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್:- ಇಂತಹ ವಿಷಯದಲ್ಲಿ ಮಾನ್ಯ ಅಧ್ಯಕ್ಷರ ತೀರ್ಮಾನವೇ ಫೈನಲ್. We don't have any other criteria. ತಾವು ಏನು ಹೇಳುತ್ತೀರೋ ಅದಕ್ಕೆ ನಾನು ಒಪ್ಪುತ್ತೇನೆ.

ಅಧ್ಯಕ್ಷರು:- ನಾನು ಇಷ್ಟೇ ಹೇಳುತ್ತೇನೆ. ಇದೊಂದು ಹೊಸದಾಗಿ ಆಗಿರತಕ್ಕ ಘಟನೆ. ಇನ್ನು ಮುಂದಕ್ಕೆ ಇಂತಹ ಸನ್ನಿವೇಶದಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವುದಕ್ಕೂ ಕೂಡ ಎಲ್ಲರಿಗೂ

ಒಂದು ಗೈಡೆನ್ಸ್ ಅದಾಂತಾಗುತ್ತದೆ. ನಾನು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ ಎಲ್ಲಾ ಫ್ಲೋರ್ ಲೀಡರ್ಸ್‌ಗಳನ್ನು, ತಮ್ಮನ್ನು ಕೂರಿಸಿಕೊಂಡು ಮತ್ತು ನಮ್ಮ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಅನ್ನೂ ಕೂಡ ಕೂರಿಸಿಕೊಂಡು ಒಂದು ತೀರ್ಮಾನಕ್ಕೆ ನಾವು ಬರೋಣ. ಇಂತಹ ಒಂದು ದುರ್ಘಟನೆ ಯಾವುದೂ ಮುಂದೆ ನಡೆಯಬಾರದು. ನಡೆಯಬೇಕು ಎಂದು ನಾವು ಯಾರೂ ಅಪೇಕ್ಷೆ ಪಡುತ್ತಿಲ್ಲ. ಒಂದು ವೇಳೆ ಅನಿವಾರ್ಯವಾಗಿ ಎಲ್ಲಾದರೂ ನಡೆದು ಹೋಯಿತು ಎಂದರೆ, ಆಗ ಹೇಗೆ ಮಾಡಬೇಕು ಎನ್ನುವುದಕ್ಕೆ ಇಲ್ಲಿಂದೀಚೆಗೆ ನಾವು ಒಂದು ಪ್ರಿಸಿಡೆಂಟ್ ಎಸ್ಟಾಬ್ಲಿಷ್ ಮಾಡೋಣ.

ಶ್ರೀ ಜೆ.ಹೆಚ್. ಪಟೇಲ್:- ತಮ್ಮ ತೀರ್ಮಾನವಾದಂತೆ ಸರ್ಕಾರ ನಡೆದುಕೊಳ್ಳುತ್ತದೆ.

ಅಧ್ಯಕ್ಷರು:- ಇದನ್ನು ಈ ಅಧಿವೇಶನ ಮುಕ್ತಾಯವಾಗುವುದರೊಳಗಾಗಿಯೇ ಮಾಡೋಣ. ಅದು ನನ್ನ ಜವಾಬ್ದಾರಿಯಾಗಿದೆ.

ಶ್ರೀ ಜೆ.ಹೆಚ್. ಪಟೇಲ್:- ನಾಳೆಯೇ ಆ ಬಗ್ಗೆ ಗೈಡ್‌ಲೈನ್ಸ್ ಮಾಡಿ. ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಒಂದು ನೀತಿಯನ್ನು ಈ ದಿಸೆಯಲ್ಲಿ ರೂಪಿಸೋಣ. ಅದು ಸುಧೀರ್ಘವಾಗುವುದು ಬೇಡ.

ಅಧ್ಯಕ್ಷರು:- ಈ ಅಧಿವೇಶನದ ಅಂತ್ಯದೊಳಗಾಗಿ ಮಾಡುತ್ತೇನೆ ಎಂದು ಆಗಲೇ ಹೇಳಿದ್ದೇನಲ್ಲಾ.

ಶ್ರೀ ಜೆ.ಹೆಚ್. ಪಟೇಲ್:- ಸಿ.ಓ.ಡಿ. ಎನ್‌ಕ್ವೈರಿ ಆಗಿದ್ದರೆ ನಾವು ಇಷ್ಟೊತ್ತಿಗೆ ತನಿಖೆ ಪೂರೈಸಿರುತ್ತಿದ್ದೆವು. ತನಿಖೆ ಪೂರೈಸಿ ಸತ್ಯಾಂಶ ಹೊರಬರುತ್ತಿತ್ತು. ಸಿ.ಬಿ.ಐ.ಗೆ ರೆಫರ್ ಮಾಡಿ ಎಂದು ಕೇಳಿದ್ದರಿಂದ ಸಿ.ಬಿ.ಐ.ಗೆ ರೆಫರ್ ಮಾಡಿದೆವು. ಆದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಕೂಡ ನಡೆಯುತ್ತಿದೆ. ಸರ್ಕಾರದ ಆಜ್ಞೆ ಹೊರಡಿಸಿ ಜ್ಯುಡಿಷಿಯಲ್ ಎನ್‌ಕ್ವೈರಿ ಕ್ಲೋಸ್ ಮಾಡುವುದಕ್ಕಾಗುವುದಿಲ್ಲ. ಸಿ.ಬಿ.ಐ.ನವರಿಗೆ ನಾವು ನೀವು ಇಂತಿಷ್ಟು ದಿವಸದೊಳಗಾಗಿ ವರದಿ ಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ಗೊತ್ತಿದ್ದೂ ಗೊತ್ತಿದ್ದೂ ನಾವು ಆ ರೀತಿ ಸಿ.ಬಿ.ಐ.ಗೆ ಹೇಗೆ ಹೇಳುವುದು? ಆ ಬಗ್ಗೆ ಬೇಕಾದರೆ ನಾವು ಕೇಂದ್ರ ಸರ್ಕಾರಕ್ಕೆ ಆದಷ್ಟು ಬೇಗ ತನಿಖೆ ಮಾಡಿ ಎಂದು ಹೇಳಬಹುದು.

ಅಧ್ಯಕ್ಷರು:- ಮಾನ್ಯ ಸದಸ್ಯರುಗಳ anxiety ಇಷ್ಟೆ, ತನಿಖೆ ಪ್ರೊಲಾಂಗ್ ಆಗುತ್ತಿದೆ, ಇದರಿಂದ ಒಂದು ಅಡ್ವರ್ಸ್ ಇನ್‌ಫರೆನ್ಸ್ ಬಂದು ಯಾರನ್ನೋ ಉಳಿಸುವುದಕ್ಕಾಗಿ ಡ್ರಾಗಾನ್ ಮಾಡುತ್ತಿದ್ದಾರೆ ಎನ್ನುವಂತಹ ಒಂದು ಅಭಿಪ್ರಾಯ ಬರಬಹುದು. ಅದಕ್ಕೆ ಅವಕಾಶ ನೀಡಲಾರದಂತೆ ತಾವು ರಾಜ್ಯ ಸರ್ಕಾರದ ವತಿಯಿಂದ ಈ ಎನ್‌ಕ್ವೈರಿಯನ್ನು ಹೇಸನ್ ಮಾಡಲು ಒಂದು ಪತ್ರ ಬರೆಯುವುದೋ ಅಥವಾ ಏನಾದರೂ ಮಾಡಿದರೆ that would improve the situation.

ಶ್ರೀ ವಾಟಾಳ್ ನಾಗರಾಜ್:- ಇಲ್ಲಿ ಏನಾಗಿದೆ ಎಂದರೆ, ಹೋದ ಏಪ್ರಿಲ್ ತಿಂಗಳಿನಲ್ಲಿ ಸಿ.ಬಿ.ಐ. ತನಿಖೆ ಶುರುವಾಗಿತ್ತು. ಈ ವರ್ಷದ ಏಪ್ರಿಲ್ ಬಂದರೂ ತನಿಖೆ ಮುಗಿದಿಲ್ಲ. ತನಿಖೆ ಆರಂಭಿಸಿ ಒಂದು ವರ್ಷವಾದರೂ ತನಿಖೆ ಮುಗಿಯದಿರುವುದರಿಂದ ಒಂದು ರೀತಿಯ ಅನುಮಾನಗಳು ಮೂಡಿ ಬರುತ್ತಿವೆ.

ಅಧ್ಯಕ್ಷರು:- ನಾವು ಈ ಸಭೆ ಸೇರಿದ ದಿವಸವೇ ಸನ್ಮಾನ್ಯ ಮುಖ್ಯಮಂತ್ರಿಗಳ ವತಿಯಿಂದ ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆಸಿ ಅವರ ಮೇಲೆ ಒತ್ತಡ ಹಾಕುವ ಕೆಲಸವನ್ನೂ ಸಹ ನಾವು ಮಾಡೋಣ.

4.50 ಪಿಎಂ

ಈ. ಬೀದರ್‌ನ ಕೋಳಾರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಮಿಕಲ್ಸ್ . ಫ್ಯಾಕ್ಟರಿಗಳ ಪ್ರಾರಂಭ.

ಶ್ರೀ ಸೈಯದ್ ಜುಲ್ಫಿಕಾರ್ ಅಲಿ ಹಶ್ಮಿ (ಬೀದರ್):- ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಬೀದರ್ ಕೋಳಾರ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಮಿಕಲ್ಸ್ ಫ್ಯಾಕ್ಟರಿ ಇದೆ. ಕೋಳಾರ ಇಂಡಸ್ಟ್ರೀಯಲ್ ಏರಿಯಾದಲ್ಲಿ ಎಂತಹ ಕೆಮಿಕಲ್ ಫ್ಯಾಕ್ಟರಿ ಎಂದರೆ, ಅದು ಒಂದು ದಿನ ಭೂಪಾಲ್ ಟ್ರಾ ಜಡಿ ಆಗುತ್ತದೆ. ಇದರ ಬಗ್ಗೆ ಮಾತುಕತೆ ಆಗಿದೆ, ಮೇಲ್ಮನೆಯಲ್ಲಿ ಮಾತುಕತೆ ಆಗಿದೆ, ಅದರ ಮೇಲೆ ಶ್ರೀಮಾನ್ ಪೂಜಾರಿಯವರ ಅಧ್ಯಕ್ಷತೆಯಲ್ಲಿನ ವಿಷಯ ಸಮಿತಿ ಅಲ್ಲಿಗೆ ಹೋಯಿತು. ಆ ಕಮಿಟಿ ರಿಪೋರ್ಟ್ ಕೊಟ್ಟಿದೆ. ಇದು ಕೆಮಿಕಲ್ ಫ್ಯಾಕ್ಟರಿ, ಟ್ರೀಟ್‌ಮೆಂಟ್ ಪ್ಲಾ ಂಟ್ ಹಾಕದಿದ್ದರೆ, ಇದು ಕ್ಲೋಸ್ ಆಗಬೇಕು ಇದು ಈ ಫ್ಯಾಕ್ಟರಿ ಅಲ್ಲಿ ಓಪನ್ ಆಗಿದೆ. ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ, ದನಕರು ಸಾಯುತ್ತೀವೆ, ಫ್ಯಾಕ್ಟರಿ ಓಪನ್ ಮಾಡಿದ್ದಾರೆ, ಮೊನ್ನೆ ಪಲ್ಯೂಷನ್ ಮಿನಿಸ್ಟರ್ ಬೀದರ್‌ಗೆ ಬಂದಾಗ ಓಪನ್ ಮಾಡಿದ್ದಾರೆ. ಲೋಕಲ್ ಎಮ್.ಎಲ್.ಎ. ಗಳಾದ ನಮಗೆ ಕರೆಯದೆ, ಎಲ್ಲಾ ಪೋಲೀಸ್ ಆಡಳಿತಾಧಿಕಾರಿಗಳ ಜೊತೆ, ಜಿಲ್ಲಾಧಿಕಾರಿಗಳ ಜೊತೆ ಕೂರಿಸಿ ಫಂಕ್ಷನ್ ಮಾಡಿ ಫೌಂಡೇಷನ್ ಹಾಕಿ ಬಂದಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಸುಮಾರು 14 ಹಳ್ಳಿಗಳು ಇದಕ್ಕೆ ಎಫೆಕ್ಟ್ ಆಗಿದೆ. ಕುಡಿಯುವುದಕ್ಕೆ ನೀರು ಇಲ್ಲ.

ಅಧ್ಯಕ್ಷರು:- ನಿಮ್ಮ ಅಬ್‌ಜೆಕ್ಷನ್ ಅಲ್ಲಿ ಫ್ಯಾಕ್ಟರಿ ಆಗಬಾರದು ಎಂದೋ ಅಥವಾ ನಿಮ್ಮನ್ನು ಕರೆಯಲಿಲ್ಲವೆಂದೋ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸದನ ಸಮಿತಿ ಹೋಗಿತ್ತು, ಆ ಸದನ ಸಮಿತಿಯವರು ಹಿಂದೆ ಏನು ಸಲಹೆ ಮಾಡಿದ್ದರೆಂದರೆ, ಅಲ್ಲಿರತಕ್ಕಂತಹ ಕೆಲವು ಫ್ಯಾಕ್ಟರಿಗಳನ್ನು ಕ್ಲೋಸ್ ಮಾಡಬೇಕು, ಏಕೆಂದರೆ ಅಕ್ಕಪಕ್ಕದ ಹಳ್ಳಿಗಳಲ್ಲಿ ಬಾವಿಗಳು ಇವೆ, ಆ ಬಾವಿಗಳಲ್ಲಿ ಕುಡಿಯುವುದಕ್ಕೆ ನೀರಿನ ಅನುಕೂಲ ಇಲ್ಲ. ಪಲ್ಯೂಷನ್ ಆಗುತ್ತಿದೆ. ಎಂದು ಈ ಸದನ ಸಮಿತಿ ವರದಿ ಕೊಟ್ಟಿದೆ. ಮೊದಲು ಆ ವರದಿ ಮೇಲೆ ಕ್ಲೋಸ್ ಆಗಿತ್ತು, ಆದರೆ ಮತ್ತೆ ಇವತ್ತು ಪುನಃ ಅವರು ವಿಸಿಟ್ ಮಾಡಿ